ಅಥವಾ ರಾಜ್ಯದ ಯಾವ ಭಾಗದಲ್ಲಿಯೇ ಆಗಬಹುದು, ರಿಜಿಸ್ಟ್ರೇಷನ್‌ನ್ನು ಮಾಡುವ ಸೌಲಭ್ಯ ಏನಿದೆ ಈ ಬಗ್ಗೆ ಆನ್-ಲೈನ್ ರಿಜಿಸ್ಟ್ರೇಷನ್ ವ್ಯವಸ್ಥೆಯನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರಿಂದಾಗಿ ರಾಮನಗರದಲ್ಲಿ ಮಾಡತಕ್ಕಂಥ ಸಬ್-ರಿಜಿಸ್ಟ್ರೇಷನನ್ನು ಇಲ್ಲಿಯೇ ಮಾಡಬಹುದು. ಇದಕ್ಕೆ ಸಂಬಂಧಪಟ್ಟಂತೆ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಒಂದು ರೀತಿಯಲ್ಲಿ ರೈಲ್ವೆ ಟಿಕೆಟನ್ನು ಯಾವುದೇ ಸ್ಥಳದಲ್ಲಿ ರಿಸರ್ವೇಷನ್ ಮಾಡುವ ಪದ್ಧತಿ ಹೇಗಿದೆಯೋ ಅದೇ ರೀತಿಯಲ್ಲಿ ರಿಜಿಸ್ಟ್ರೇಷನನ್ನೂ ಕೂಡ ಯಾವುದೇ ಸಬ್-ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಮಾಡಬಹುದು. ಇದಕ್ಕೆ ಸಂಬಂಧಪಟ್ಟಂತೆ ಮಾರ್ಗಸೂಚಿ ದರಗಳನ್ನು ಫ್ಲಾಪಿಯಲ್ಲಿ ಸಿಗುವಂತೆ ಮಾಡಲಾಗುತ್ತಿದೆ. ಈ ಮಾರ್ಗಸೂಚಿ ದರಗಳ ಪ್ರಕಾರ ಯಾವುದೇ ಸಬ್-ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟ್ರೇಷನ್ ಮಾಡಿಸಬಹುದು. ಅದನ್ನೂ ಕೂಡ ನಾವು ತರುತ್ತೇವೆ. ಹೀಗಾಗಿ ಕೆಲವು ರೆವಲ್ಯೂಷನರಿ ಬದಲಾವಣೆಗಳನ್ನು ಮಾಡುತ್ತಿದ್ದೇವೆ. ಆದರೆ ನಮಗೆ ಟೈಮ್ ಇಲ್ಲ. ಆದರೆ ಸಿಕ್ಕಿರತಕ್ಕಂಥ ಒಂದು ವರ್ಷದ ಅವಧಿಯಲ್ಲಿ ನಾವು ತಂದಿರತಕ್ಕಂಥ ಬದಲಾವಣೆಗಳ ಬಗ್ಗೆ ಹೇಳುತ್ತಾ ಹೋದರೆ ಸಮಯವೇ ಸಾಕಾಗುವುದಿಲ್ಲ. ಅಂಥ ಐತಿಹಾಸಿಕ ತೀರ್ಮಾನಗಳನ್ನು ನಮ್ಮ ಸರ್ಕಾರ ಮಾಡಿದೆ. ಆದುದರಿಂದ ಪತ್ರಿಕೆಯವರೂ ಹಾಗೂ ಶಾಸಕರುಗಳೂ ಸಹ ನಮಗೆ ಸಹಕಾರವನ್ನು ಕೊಡಬೇಕು. ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಭೆಗಳನ್ನು ಮಾಡಿದಾಗ ಸಾರ್ವಜನಿಕರಿಗೆ ಈ ಬಗ್ಗೆ ತಿಳುವಳಿಕೆಯನ್ನು ನೀಡಬೇಕು. ಸಾರ್ವಜನಿಕರು ಎಲ್ಲಿಯವರೆಗೆ ಇರುವ ವ್ಯವಸ್ಥೆಯನ್ನು ಅಕ್ಸೆಪ್ಟ್ ಮಾಡಿಕೊಳ್ಳುತ್ತಾರೋ ಅಲ್ಲಿಯವರೆವಿಗೂ ಇದು ಹೀಗೆಯೇ ನಡೆದುಕೊಂಡು ಹೋಗುತ್ತಿರುತ್ತದೆ. ಮಾನ್ಯ ಸಭಾಧ್ಯಕ್ಷರು ಆಗಲೇ ಒಂದು ಮಾತನ್ನು ಹೇಳಿದರು. ಇವೊತ್ತು ಎರಡು ಪರ್ಸೆಂಟ್ ಜನರು ಯಾರಿದ್ದಾರೆ, they are taking the people for ride. If it has to be corrected, our representatives have to take initiative and educate the people .....

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಮಂತ್ರಿಯವರೇ, ರಿಜಿಸ್ಟ್ರೇಷನ್ ಆದ ಕೂಡಲೇ ಆ ಸ್ಲಿಪ್ ಬಂದ ತಕ್ಷಣ ಆಟೋಮ್ಯಾಟಿಕಲಿ ಖಾತೆ ಪಹಣಿ ಬದಲಾವಣೆ ಮಾಡಿಕೊಡುವ ಕೆಲಸವನ್ನು ಈಗ ಮಾಡುತ್ತಿಲ್ಲ. ಅದನ್ನು ಮಾಡಬೇಕು.

ಶ್ರೀ ಬಿ. ಸೋಮಶೇಖರ್ : ಅದನ್ನೂ ಕೂಡ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದರೆ ಅದನ್ನು ಜಾರಿಗೆ ತರಬೇಕಾದರೆ ನಮಗೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಸಾಗರ ಪುರಸಭೆಯ ವ್ಯಾಪ್ತಿಯಲ್ಲಿ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆಗೆ ಜಮೀನಿನ ಮಂಜೂರಾತಿ

413 - ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ ಪುರಸಭೆಯ ವ್ಯಾಪ್ತಿಯಲ್ಲಿ ನಿವೇಶನ ರಹಿತರಿಗೆ ಆಶ್ರಯ ಯೋಜನೆ ಅಡಿ ನಿವೇಶನ ಹಂಚಲು ಸಾಗರ ತಾಲ್ಲೂಕು ಕಂಬಳಿಕೊಪ್ಪ ಗ್ರಾಮದ ಸ.ನಂ. 52ರಲ್ಲಿ 13-

02 ಎಕರೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯು ಬಂದಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈವರೆಗೆ ಸರ್ಕಾರ ಮೇಲ್ಕಂಡ ಜಮೀನನ್ನು ಆಶ್ರಯ ಸಮಿತಿಗೆ ಮಂಜೂರು ಮಾಡದಿರಲು ಕಾರಣವೇನು ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಹೌದು.

ಆ) ಪ್ರಶ್ನಿತ ಜಮೀನು ಗೋಮಾಳ ಜಮೀನಾಗಿದೆ. ಉಚ್ಚ ನ್ಯಾಯಲಯವು ರಿಟ್ ಅರ್ಜಿ ಸಂಖ್ಯೆ 28866:93ರಲ್ಲಿ ದಿನಾಂಕ 8.12.97ರಂದು ನೀಡಿದ ತೀರ್ಪಿನಂತೆ ಈ ಜಮೀನುಗಳನ್ನು ಸಂರಕ್ಷಿಸಬೇಕಿದೆ. ಆದರೆ ರಾಜ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಪೀಲು ಸಂಖ್ಯೆ 5168:98 ಮತ್ತು 5169:98ರಲ್ಲಿ ದಿನಾಂಕ 18.1.99ರಲ್ಲಿ ನೀಡಿದ ಬೇರೊಂದು ತೀರ್ಪಿನಂತೆ ಗೋಮಾಳ ಜಮೀನುಗಳ ನಿರ್ವಹಣೆ ಮತ್ತು ವಿಲೇಮಾಡುವ ಬಗ್ಗೆ ಒಂದು ನೀತಿ ನಿರೂಪಣಾ ನಿರ್ಧಾರವನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರದಲ್ಲಿ ದಿನಾಂಕ 8.12.97ರಂದು ರಾಜ್ಯದ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಜಮೀನು ಕೊಡುವುದನ್ನು ನಿಲ್ಲಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಲ್ಯಾಂಡ್ ರೆವಿನ್ಯೂ ಆಕ್ಟ್ ಮತ್ತು ನಿಯಮಾವಳಿಗಳ ಪ್ರಕಾರ ಎಷ್ಟು ಜಾನುವಾರುಗಳಿಗೆ ಎಷ್ಟು ಗೋಮಾಳ ಇರಬೇಕೆಂದು ಕಾನೂನಿನಲ್ಲಿ ಇದೆ. ಈ ನ್ಯಾಯಾಲಯ ಏನು ಹೇಳಿದೆ ಎಂಬುದೇ ನಮಗೆ ಗೊತ್ತಿಲ್ಲ. ಅವರು ಇರತಕ್ಕಂಥ ಕಾನೂನಿನ ನಿಯಮಗಳನ್ನು ಮೀರಿ ಹೇಳಿದ್ದಾರೋ ಅಥವಾ ಅದರ ವ್ಯಾಪ್ತಿಯಲ್ಲಿಯೇ ಹೇಳಿದ್ದಾರೋ ಎಂಬುದು ಗೊತ್ತಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಈ ಲ್ಯಾಂಡ್ ರೆವಿನ್ಯೂ ಆಕ್ಟ್‌ನ ಸೆಕ್ಷನ್ 97ರ ಪ್ರಕಾರ ಆ ಗೋಮಾಳ ಜಮೀನನ್ನು ಕೆಲವೇ ಉದ್ದೇಶಕ್ಕಾಗಿ ಇಡುತ್ತೇವೆ. ಒಂದನೆಯದಾಗಿ ನಿವೇಶನಗಳನ್ನು ಕೊಡಬಹುದು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರಿಗೆ ಜಮೀನು ಇಲ್ಲದಿದ್ದರೆ ಅಂಥವರಿಗೆ ಜಮೀನನ್ನು ಕೊಡಬಹುದು. ಇದಲ್ಲದೇ ಸೆಕ್ಷನ್-94ರ ಪ್ರಕಾರ ಬಗರ್‌ಹುಕುಂ ಸಾಗುವಳಿದಾರರಿಗೆ ಕೊಡಬಹುದು. ಈ ಉದ್ದೇಶಗಳನ್ನೂ ಬಿಟ್ಟು, ಬೇರೆ ಯಾವ ಉದ್ದೇಶಕ್ಕೂ ಜಮೀನು ಮಂಜೂರಾತಿ ಮಾಡಬಾರದು ಎಂದು ಹೇಳಲಾಗಿದೆ. ಈ ಆಕ್ಟ್ ಪ್ರಕಾರ ಜಿಲ್ಲಾಧಿಕಾರಿಗಳು ಆ ಜನರಿಗೆ ನಿವೇಶನ ಕೊಡಬಹುದಿತ್ತು. ಆದರೂ ಅವರು ಸರ್ಕಾರಕ್ಕೆ ಬರೆದಿದ್ದಾರೆ. ಅವರಿಗೆ ಈಗಾಗಲೇ ನಿರ್ದೇಶನ ಕೊಟ್ಟು ನಿವೇಶನಕ್ಕಾಗಿ ಗೋಮಾಳ ಜಮೀನನ್ನು ಕೊಡಬಹುದು ಎಂದು ಹೇಳಿದ್ದೇನೆ. ಆದುದರಿಂದ ಆ ಜನರಿಗೆ ನಿವೇಶನ ಕೊಡುವುದಕ್ಕೇನೂ ನಮಗೆ ತೊಂದರೆ ಇಲ್ಲ.